ಕಾಣಿಸಿದ. ಇವರು ಬಂದ ಸುದ್ದಿಯನ್ನು ಗೇಟಿನ ಬಳಿ ಕುರ್ಚಿ ಹಾಕಿಕೊಂಡು ಕುಳಿತಿದ್ದ ಗೂರ್ಖ ಒಳಗೆ ತಲುಪಿಸಿ, ಗೇಟನ್ನು ಅಗಲವಾಗಿ ತೆಗೆದ. ಮೊದಲ ಸ್ವಾಗತ ಅವನಿಂದ ಸಿಗುತ್ತಿದ್ದಂತೆ ಮನೆಯ ಹೆಬ್ಬಾಗಿಲು ತೆರೆದುಕೊಂಡಿತ್ತು. ಮನೆಯ ಯಜಮಾನ, ಯಜಮಾಂತಿ ಬಾಗಿಲಲ್ಲಿ ಪ್ರತ್ಯಕ್ಷರಾಗಿದ್ದರು. 'ಬನ್ನಿ... ಬನ್ನಿ...' ಎನ್ನುವ ಹಾರ್ದಿಕ ಸ್ವಾಗತ. ಮನೆಯೊಡತಿಯ ಮುಖ ನೋಡುತ್ತಿದ್ದಂತೆ ದಂಗಾಗಿದ್ದಳು ಭಾಮಾ. ನೋಡಿ ದಶಕಗಳೇ ಕಳೆದಿದ್ದರೂ ಅವಳ ಕಣ್ಣುಗಳು ಮೋಸ ಹೋಗದೆ ಥಕ್ಕನೆ ಅವಳನ್ನು ಗುರುತಿಸಿದ್ದುವು. ಸುಲೋಚನಾ ಅಲ್ಲವೇ? ಅನುಮಾನವಿಲ್ಲ, ಅವಳೇ. ಒಂದಿಷ್ಟು ಸುಖದ ಬೊಜ್ಜು ಮೈ ಹೇರಿಕೊಂಡಿದೆಯಾದರೂ ಒಟ್ಟಾರೆ ಚಹರೆಯಲ್ಲಿ ಹೆಚ್ಚು ವ್ಯತ್ಯಾಸವೇನಾಗಿಲ್ಲ. ಚಿನ್ನದಂಗಡಿಯಲ್ಲಿ ಪ್ರದರ್ಶನಕ್ಕಿಟ್ಟಂತೆ ಮೈ ತುಂಬಾ ನಗನಟ್ಟು ಲಕಲಕಿಸುತ್ತಿವೆ. ಫಳಗುಟ್ಟುತ್ತಿರುವ ಕಿವಿಯೋಲೆ ವಜ್ರದ್ದೇ ಆಗಿರಬಹುದು. ಆಗಿರಬಹುದು ಯಾಕೆ? ಆಗಿರುತ್ತದೆ. ಧಾರಾವಾಹಿಗಳಲ್ಲಿ ಮಿಂಚುವ ಶ್ರೀಮಂತ ಮನೆತನದ ನಟೀಮಣಿಯರಂತೆ ಗೇಣಗಲ ಅಂಚಿನ ಜರತಾರಿ ಸೀರೆ. ಬಣ್ಣ ಹಚ್ಚಿದ ಕಡುಗಪ್ಪು ಕೂದಲು ವಯಸ್ಸನ್ನು ಇದ್ದಿದ್ದಕ್ಕಿಂತಾ ಕಡಿಮೆಯಾಗಿಸಿದೆ. ಹೇಗಿದ್ದವಳು ಹೇಗಾಗಿದ್ದಾಳೆ ಎಂದುಕೊಳ್ಳುವಾಗ ಹೊಟ್ಟೆಯೊಳಗೆ ಸಣ್ಣಗೆ ಹೊರಳಾಡಿತು ಮತ್ಸರ. ಅವಳಿಗೆ ಹೋಲಿಸಿದರೆ ಅವಳ ಗಂಡ ಅವಳ ಅಪ್ಪನೇನೋ ಅನಿಸುವಂತಿದ್ದಾರೆ. ತಾನು ಅವಳನ್ನು ಗುರ್ತಿಸಿದಂತೆ ಅವಳೂ ತನ್ನನ್ನು ಗುರುತಿಸಿದಳೇ? ಗುರುತಿಸದಿರಲು ಹೇಗೆ ಸಾಧ್ಯ? ತಾನೂ ಸಹಾ ಹೇಳಿಕೊಳ್ಳುವಷ್ಟೇನೂ ಬದಲಾಗಿಲ್ಲ. 'ನೀನಾ ಮಾರಾಯ್ತೀ, ಎಷ್ಟು ವರ್ಷಗಳಾಯ್ತಲ್ಲೇ ನಿನ್ನ ನೋಡಿ? ಇವಳು ಭಾಮಾ ಕಣ್ರೀ. ಒಂದೇ ಊರಿನೋರು ನಾವು...' ಸುಲೋಚನಾ ತನ್ನನ್ನು ಆತ್ಮೀಯ ಭಾವದಿಂದ ಗಂಡನಿಗೆ ಪರಿಚಯಿಸಿಕೊಡುತ್ತಾಳೆ ಅಂದುಕೊಂಡರೆ ಹಾಗೇನಾಗಲಿಲ್ಲ. ನಿಜಕ್ಕೂ ಇವಳಿಗೆ ಗುರುತು ಸಿಗಲಿಲ್ಲವಾ ಅಥವಾ ಸಿಕ್ಕಿದರೂ ಸಿಕ್ಕದಂತೆ... ತಾನೇ ಇವಳ ಹೆಸರು ಹಿಡಿದು ಗಂಡನಿಗೆ ಪರಿಚಯಿಸಲೇ? ಯಾಕೋ ಆ ಉತ್ಸುಕತೆ ಬರಲಿಲ್ಲ ಭಾಮಾನಿಗೆ. ಅಂತೂ ಮೊದಲ ತುತ್ತಿನಲ್ಲೇ ನೊಣ ನುಂಗಿದ ಅನುಭವ. ಮೇಲ್ಮಹಡಿಯಿಂದ ನಿಧಾನವಾಗಿ ಇಳಿದು ಬಂದಳು ಆ ಮನೆಯ ಮಗಳು, ಅಮ್ಮನ ಪ್ರತಿರೂಪದಂತಿದ್ದವಳು. ಪರಿಚಯದ ಕಲಾಪ ಮುಗಿಯಿತು. ಮುಂದಿನ ಆತಿಥ್ಯವೆಲ್ಲಾ ಶ್ರೀಮಂತರ ಜರ್ಬಿಗೆ ತಕ್ಕಂತೆ ಯಥಾಸಾಂಗವಾಗಿ ನಡೆಯಿತು. ಕೂತಲ್ಲಿಂದ ಅಲುಗಾಡದೆ ಕೈಬೆರಳ ಸನ್ನೆಯಿಂದಲೇ ಪ್ರತಿಯೊಂದನ್ನೂ ನಡೆಸಿಕೊಟ್ಟಳು ಸುಲೋಚನಾ. ವಿಶಾಲವಾದ ಊಟದೊಳಗಿನಲ್ಲಿ ಬೆಲೆಬಾಳುವ ಉದ್ದಾನುದ್ದದ ಡೈನಿಂಗ್ ಟೇಬಲಿನ ಎರಡೂ ಬದಿಗಳಲ್ಲಿ ಸಾಲಾಗಿ ಹಾಕಿದ್ದ ಕುರ್ಚಿಗಳಲ್ಲಿ ಕೂತು ಭರ್ಜರಿ ಉಪಾಹಾರ. ಮದುವೆಗಿದ್ದ ಯುವಕನೂ ಬಂದು ಸೇರಿಕೊಂಡಿದ್ದ. ಅಮ್ಮ, ಅಕ್ಕನಂತೆ ಪ್ರದರ್ಶನಕ್ಕಿಟ್ಟವನ ಹಾಗೆ ಕಾಣಿಸದೆ ತಂದೆಯಂತೆ ಸರಳವಾಗಿದ್ದ ಸಾದಾಸೀದಾ ಹುಡುಗ. ಅಡುಗೆಯಾಕೆ ಒಂದೊಂದಾಗಿ ತಂದು ಬಡಿಸುತ್ತಿದ್ದ ಸ್ವಾದಿಷ್ಟ ತಿನಿಸುಗಳು ಗಂಟಲಲ್ಲಿ ಇಳಿಯಲು ಒಲ್ಲೆ ಅನ್ನುತ್ತಿದ್ದರೂ ಚಾಣಾಕ್ಷೆ ಭಾಮಾ ಅದನ್ನು ತೋರಿಸಿಕೊಳ್ಳಲಿಲ್ಲ. ತನಗೂ ಅವಳ ಗುರುತು ಸಿಕ್ಕಲಿಲ್ಲವೆನ್ನುವಂತೆ ನಟಿಸುತ್ತಿದ್ದವಳು ಎಲ್ಲರೊಳಗೊಂದಾಗಿ ಲೋಕಾರೂಢಿಯ ವಾರ್ತಾಲಾಪದಲ್ಲಿ ಪಾಲ್ಗೊಂಡಳು. ಹುಡುಗನಿಗಾಗಲೀ, ಅವನ ಅಕ್ಕನಿಗಾಗಲೀ ತಮ್ಮ ಮಗಳು ಇಷ್ಟವಾಗಿದ್ದಾಳೆಂದು ಅವರ ಲವಲವಿಕೆಯ ನಡೆನುಡಿಗಳೇ ಅರ್ಥ ಮಾಡಿಸುತ್ತಿದ್ದುವು. ಹುಡುಗ, ಹುಡುಗಿ ಪರಸ್ಪರ ಮಾತಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟು ದೊಡ್ಡವರು ತಮ್ಮ ಲೋಕಾರೂಢಿಯ ಮಾತಿನಲ್ಲಿ ಸಮಯ ಕಳೆದು, ಅಂತೂ ಬೀಳ್ಕೊಡುಗೆಯ ಹೊತ್ತು ಬಂತು. ಉಬ್ಬೆಗೆ ಹಾಕಿಟ್ಟಂತೆ ಕೂತಲ್ಲೇ ಉಸಿರು ಕಟ್ಟಿದವಳಂತಾಗಿದ್ದ ಭಾಮಾ ಎಲ್ಲರಿಗಿಂತಾ ಮೊದಲು ಮನೆಯಾಚೆ ಹೆಜ್ಜೆ ಇಟ್ಟಳು.

'ಪರವಾಗಿಲ್ಲ ಕಣೇ ಫ್ಯಾಮಿಲಿ. ಹುಡುಗನೂ ಸಭ್ಯ ಅನ್ನಿಸುತ್ತೆ. ನಮ್ಮ ಹುಡುಗೀನ ಒಪ್ಪಿದ ಹಾಗೆ ಕಾಣಿಸುತ್ತೆ. ನೀನು ಏನಂತಿ ಮಗಳೇ...'

ಮಗಳು ಅಮ್ಮನ ಮುಖ ನೋಡಿದಳು ಮತ್ತು ಅಮ್ಮ ಕಾರಿನ ಕಿಟಕಿಯಾಚೆಗಿನ ಜಗತ್ತನ್ನು ಬಹಳ ತನ್ಮಯತೆಯಿಂದ ಗಮನಿಸುವವಳಂತೆ ಅತ್ತ ಮುಖ ತಿರುವಿ ಕುಳಿತಿದ್ದಳು.

* * *